ವರ್ಷ ಅವರ ಅವಧಿಯನ್ನು ವಿಸ್ತರಿಸಿತು. ಅಷ್ಟರಲ್ಲಿ ಸಿಮ್ಹಾನ್ಸ್‌ನ ಆಡಳಿತ ಅಧೋಗತಿಗಿಳಿದಿದ್ದರಿಂದ ಸರ್ಕಾರವೇ ಗೌರವ ನಿರ್ದೇಶಕ ಎಂಬ ಹೊಸ ಹುದ್ದೆಯೊಂದನ್ನು ಸೃಷ್ಟಿಸಿ, ಆಡಳಿತವನ್ನು ಅವರ ಕೈಗೆ ಒಪ್ಪಿಸಿ ಮತ್ತೆ ಯಥಾಸ್ಥಿತಿಗೆ ತರಲು ಕೋರಿಕೊಂಡಿತ್ತು. ಆದರೂ ವಿಶ್ವವಿದ್ಯಾಲಯದ ಕುಲಪತಿ ಆಯ್ಕೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಇವರಿಗೇ ವಹಿಸಿದ್ದುದು ಒಂದು ರೀತಿಯಲ್ಲಿ ಅವರ ಮೇಲಿನ ವಿಶ್ವಾಸವನ್ನು ವೃದ್ಧಿಸಿತ್ತು.

ಸಿಮ್ಹಾನ್ಸ್‌ನ್ನು ಮತ್ತೂ ಐದು ವರ್ಷ ನಿಭಾಯಿಸುವ ಹೊತ್ತಿಗೆ ಎಪ್ಪತ್ತು ವರ್ಷ ಮೀರಿಹೋಗಿ ಇನ್ನು ತನ್ನಿಂದ ನಿರಂತರವಾಗಿ ದುಡಿಯಲಾರೆನೆನ್ನಿಸಿ, ನಿರಾಳವಾಗಲು ಬಯಸಿದ್ದರು. ವಯಸ್ಸು ಎಷ್ಟಾದರೂ ಮನಸ್ಸು ಮಾತ್ರ ಇನ್ನೂ ಇಪ್ಪತ್ತರವರನ್ನು ಮೀರಿಸುವಂಥ ಸ್ಫುರಣೆಯನ್ನು ಹೊಂದಿತ್ತು. ಮನಸ್ಸೆಂಬುದು ಮರ್ಕಟನಂತೆ ಏನೇನನ್ನೋ ಬಯಸುತ್ತಿದ್ದರೂ, ಧ್ಯಾನದ ಮೂಲಕ ಅದನ್ನು ನಿಯಂತ್ರಿಸುತ್ತಿದ್ದರು. ಮನೋವಿಜ್ಞಾನದ ಬಗ್ಗೆ ನೂರಕ್ಕೂ ಅಧಿಕ ಪುಸ್ತಕಗಳನ್ನು ಬರೆದಿದ್ದರು. ಮನಸ್ಸಿನ ನಿಗ್ರಹಕ್ಕೆ, ನಿಯಂತ್ರಣಕ್ಕೆ ಧ್ಯಾನವೇ ಅಂತಿಮ ಸತ್ಯ ಎಂದು ಪ್ರತಿಪಾದಿಸಿದ್ದರು. ಭಾರತೀಯರಿಗೆ ಇದು ಪುರಾತನವಾದದ್ದಾದರೂ ವಿದೇಶೀಯರಿಗೆ ಏನೋ ಹೊಸತನವಿದೆಯೆನ್ನಿಸಿ ಆಕರ್ಷಿತರಾಗುತ್ತಿದ್ದರು. ಆದರೆ ಸರ್ಕಾರ ಬದಲಾದುದರಿಂದ ಹುಟ್ಟಿಕೊಂಡ ಹೊಸ ತಲೆಮಾರಿನ ಹುಡುಗರು, 'ಈ ಡಾಕ್ಟರರಿಗೆ ತಲೆ ಸರಿಯಿಲ್ಲ. ಮನೋರೋಗಿಗಳನ್ನು ನೋಡೀ ನೋಡಿ ಅವರೇ ಮೆಂಟಲ್ಲಾಗಿಬಿಟ್ಟಿದ್ದಾರೆ' ಎಂದು ಕಿಚಾಯಿಸುತ್ತಿದ್ದರು. ಭಾರತೀಯ ಸಂಸ್ಕೃತಿಯತ್ತ ಹೆಚ್ಚು ಒತ್ತು ಕೊಡುತ್ತಿದ್ದುದರಿಂದ, ಬರುಬರುತ್ತ ಅಧ್ಯಾತ್ಮದತ್ತ, ಮೂಲಭೂತವಾದಿ ಬಲಪಂಥದತ್ತ ವಾಲುತ್ತಿರುವುದಾಗಿ ಆಪಾದನೆಗಳು ಕೇಳಿಬಂದವು.

ಅನೇಕ ಸಲ ದೇಹ ತಮ್ಮ ಮಾತನ್ನೇ ಕೇಳುತ್ತಿಲ್ಲ ಎಂದು ಅವರಿಗೇ ಅನ್ನಿಸುತ್ತಿತ್ತು. ಒಂದಾದ ಮೇಲೊಂದರಂತೆ ಎರಡೂ ಕಣ್ಣಿನ ಕ್ಯಾಟರ್ಯಾಕ್ಟ್ ಸರ್ಜರಿ ಮಾಡಿದ ಡಾ. ನೇತ್ರಕರ್, 'ಕಣ್ಣಿಗೆ ಸ್ವಲ್ಪ ರೆಸ್ಟ್ ಕೊಡಿ, ಅಷ್ಟೊಂದು ಓದುವುದು ಬರೆಯುವುದು ಮಾಡಬೇಡಿ' ಎಂದಾಗ, ಕಣ್ಣಿಲ್ಲದಿದ್ದರೆ ನಾನು ಬದುಕಿರುವುದೇ ನಿರರ್ಥಕ ಎಂದು ಕಣ್ಣೀರು ಹಾಕಿದ್ದರು. ವಯೋಮಾನದ ಪ್ರಭಾವದಿಂದಾಗಿ ದೇಹದಲ್ಲಿನ ರಕ್ತ ತನ್ನ ಬಿಸಿಯನ್ನು ಕಳೆದುಕೊಂಡು, ಪದೇಪದೇ ಮೈಕೈ ನೋವಿನಿಂದ ಬಳಲುತ್ತಿದ್ದರು. ಮಂಡಿಯಂತೂ ಎಲ್ಲೆಂದರಲ್ಲಿ ಲಾಕ್ ಆಗಿಬಿಡುತ್ತ ತನ್ನ ವಿಕರಾಳ ದರ್ಶನವನ್ನು ಮಾಡಿಸುತ್ತಿತ್ತು. ಒತ್ತಡದ ಕಾರ್ಯಭಾರದಿಂದಾಗಿ ಬಿ.ಪಿ., ಶುಗರ್ರುಗಳೆನ್ನುವುವು ಆವರಿಸಿಕೊಂಡು ಆಗಲೇ ಹದಿನೈದಿಪ್ಪತ್ತು ವರ್ಷಗಳೇ ಆಗಿಹೋಗಿದ್ದವು. ಪ್ಯಾಂಕ್ರಿಯಾಸ್ ತನ್ನ ಕೆಲಸವನ್ನು ನಿಲ್ಲಿಸಿದ್ದರಿಂದಾಗಿ ಟೈಪ್–1 ಡಯಾಬಿಟೀಸ್‌ಗೆ ತಿರುಗಿ ದಿನಕ್ಕೆ ಎರಡು ಸಲ ಇನ್ಸುಲಿನ್ ತೆಗೆದುಕೊಳ್ಳಬೇಕಾಗಿತ್ತು.

ಅಂಥ ಸಂದರ್ಭದಲ್ಲಿ ಒಂದು ದಿನ ಕಾರಿನಿಂದ ಇಳಿಯುವಾಗ, ಹುಡುಗಿ ಹಿಂದೆ ಕೂತಿರುವ ಜೋಶ್‌ನಲ್ಲಿ ವ್ಹೀಲಿಂಗ್ ಮಾಡಿಕೊಂಡು ಬಂದ ಹುಡುಗನೊಬ್ಬ ಗುದ್ದಿ ಕಾಲಿನ ಮೂಳೆ ಮುರಿದುಹೋಗಿ ಅಲ್ಲೇ ಕುಸಿದುಬಿದ್ದಿದ್ದರು. ಆರ್ಥೋಸ್ಪೆಶಲಿಸ್ಟ್ ಡಾ. ಶಿವಪ್ರಸಾದ್ ಸ್ಟೀಲ್‌ಪ್ಲೇಟ್ ಹಾಕಿ ಕಾಲಿನ ಮೂಳೆ ಕೂಡಿಸಿ ಸರಿಪಡಿಸಿದರೂ, ಡಯಾಬಿಟೀಸ್‌ನಿಂದಾಗಿ ಹೊರಗಿನ ಗಾಯ ಬೇಗ ಮಾಯದೇ ಸತಾಯಿಸುತ್ತಿತ್ತು. ಡಯಾಬಿಟೀಶಿಯನ್ ಡಾ. ಶೀಲಾ ಮತ್ತು ಡಾ. ಅರವಿಂದ್ ದಂಪತಿಗಳು ಸತತ ನಿಗಾ ವಹಿಸಿದರೂ, ಯಾವುದೋ ವಿಷಯವನ್ನು ಹೇಳಲು ಹಿಂಜರಿಯುತ್ತಿರುವಂತೆ ಕಾಣುತ್ತಿತ್ತು. ಆದರೆ ಡಾಕ್ಟರನಾದ ತನಗೇ ಯಾಕೋ ಅದು ಗ್ಯಾಂಗ್ರಿನ್ ಲಕ್ಷಣಗಳು ಎಂದು ಕಂಡುಬರುತ್ತಿದ್ದು, ಕಾಲನ್ನೇ ಕತ್ತರಿಸಬೇಕಾದಂಥ ಪ್ರಮೇಯ ಬಂದರೆ ಎಂಬ ಆತಂಕವೇ ಭಯಂಕರವಾಗಿ ಹೆದರಿಸುತ್ತಿತ್ತು.

**ಡಾ. ಮೈಥಿಲಿ, ನಿರಾಯಾಸವಾಗಿ ಸಿಜೇರಿಯನ್ ನಡೆಸಿ ಮಗುವನ್ನು ಹೊರತೆಗೆದರು. ಅಳದಾದಾಗ ಅದನ್ನು ತಲೆಕೆಳಗು ಮಾಡಿ ಕುಂಡಿ ಮೇಲೆ ಒಂದು ಪೆಟ್ಟು ಹಾಕಿ ಅಳಿಸಿ, ಇನ್‌ಕ್ಯುಬೇಟರ್‌ನಲ್ಲಿ ಮಗುವನ್ನು ಇರಿಸಲು ಹೇಳಿದರು. ಡೆಟಾಲ್‌ನಿಂದ ಕೈತೊಳೆದುಬಂದು ನಿರಾಳವಾಗಿ ತಾಯಿಯ ಮುಖದ ಮೇಲಿನ ಮಂದಹಾಸವನ್ನು ಆಸ್ವಾದಿಸಲು ಆಕೆಯ ಮುಖ ನೋಡಿದರು... ಅರೇ, ಡಾ.ಚಿರಂಜೀವಿ!**

ಆದರೂ ಅವರು ಮಲಗಿದ್ದಲ್ಲಿಗೇ ಅನೇಕ ಪುಸ್ತಕಗಳನ್ನು ತರಿಸಿಕೊಂಡು ಓದುತ್ತಿದ್ದರು. ಲೇಖನಗಳನ್ನು ನೇರವಾಗಿ ಲ್ಯಾಪ್‌ಟಾಪ್‌ನಲ್ಲಿ ಕೀ ಮಾಡಿ ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ಆರ್ಗನ್ ಟ್ರಾನ್ಸ್‌ಪ್ಲಾಂಟೇಶನ್ ಮಾಡಿದಾಗ ದೇಹದಲ್ಲಾಗುವ ಪ್ರಕ್ರಿಯೆಗಳಿಗೆ ಪೂರಕವಾಗಿ ಉಂಟಾಗುವ ಮಾನಸಿಕ ತುಮುಲಗಳ ಬಗ್ಗೆ ಒಂದು ಲೇಖನವನ್ನು ಬರೆಯುತ್ತಿದ್ದರು. ಅದರಲ್ಲಿ ಬ್ಲಡ್, ಹೇರ್, ಸ್ಕಿನ್‌ನಿಂದ ಆರಂಭಿಸಿ, ಕಣ್ಣು, ಹಾರ್ಟ್, ಕಿಡ್ನಿ, ಲಿವರ್, ಕೊನೆಗೆ ಪ್ಯಾಂಕ್ರಿಯಾ ಟ್ರಾನ್ಸ್‌ಪ್ಲಾಂಟೇಶನ್‌ಗಳ ಬಗ್ಗೆಯೂ ಪ್ರಸ್ತಾಪಿಸಿ ಸುದೀರ್ಘ ಲೇಖನ ಬರೆದು ಲೀಡಿಂಗ್ ವಾರಪತ್ರಿಕೆಯೊಂದಕ್ಕೆ ಕಳಿಸಿದರು. ಅವರು ಅದನ್ನು ಮುಖಪುಟ ಲೇಖನ ಮಾಡಿ ಪ್ರಕಟಿಸಿದರು. ಅದಕ್ಕೆ ಸಿಕ್ಕ ಪ್ರತಿಕ್ರಿಯೆಯಿಂದಾಗಿ ಮಾರ್ಕೆಟ್‌ನಲ್ಲಿ ಮುಂದಿನ ವಾರದ ಸಂಚಿಕೆಗಿಂತಲೂ ಅಪಾರ ಪ್ರಮಾಣದಲ್ಲಿ ಹಿಂದಿನ ಸಂಚಿಕೆಯನ್ನೇ ಮುದ್ರಿಸಿ ಸರಬರಾಜು ಮಾಡಿದರೆಂದು ತಿಳಿದುಬಂತು. ಇದು ಯಾವ ಲೇಖಕನಿಗೆ ತಾನೇ ಖುಷಿ ತರದ ವಿಚಾರ? ಅದೇ ನೆಪವಾಗಿ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯೊಂದು ಅದನ್ನು ಇನ್ನಷ್ಟು ವಿಸ್ತರಿಸಿ ಪುಸ್ತಕ ಮಾಡುವ ಉತ್ಸುಕತೆ ತೋರಿಸಿತು. ನಿಮ್ಮ ಪ್ರಖರ ವಿಚಾರಧಾರೆಗೆ ವೈದ್ಯಲೋಕ ಮಾತ್ರವಲ್ಲ, ಇಡೀ ಮನುಷ್ಯಸಂಕುಲವೇ ವಿಸ್ಮಯಗೊಂಡಿದೆ ಎಂದು ಆ ಲೇಖನವನ್ನು ಅಮೆರಿಕಾದ ಪತ್ರಿಕೆಯೊಂದಕ್ಕೆ ಅನುವಾದಿಸಿಕೊಟ್ಟಿದ್ದ ಯುವ ಪತ್ರಕರ್ತ ಮಂಜುನಾಥ್ ಹೇಳಿದಾಗ, ಅದನ್ನು ತಾನೇ ಇಂಗ್ಲಿಷ್‌ನಲ್ಲಿ ಬರೆದಿದ್ದರೆ ಹೊಸಹೊಸ ಡೈಮೆನ್ಷನ್‌ನೊಂದಿಗೆ ಇನ್ನೂ ಚೆನ್ನಾಗಿಯೇ ಬರೆಯಬಹುದಿತ್ತಲ್ಲ ಅನ್ನಿಸಿತು. ಅನುವಾದ ಮಾಡಲು ಬೇಕಾದ ಅದೇ ಸಮಯವನ್ನು ವ್ಯರ್ಥ ಮಾಡುವುದರ ಬದಲು ಹೊಸದಾಗಿ ಇನ್ನೇನಾದರೂ ಬರೆಯಬಹುದಲ್ಲವೇ... ನಿಜ, ಇನ್ನೆಷ್ಟು ದಿನ ತಾನೇ ತಾನು ಬದುಕಿರಲು ಸಾಧ್ಯ. ಮನಸ್ಸು ಎಂಬುದು ಎಷ್ಟೇ ಗಟ್ಟಿಯಾಗಿದ್ದರೂ, ತಮ್ಮ ವಿಚಾರಗಳು ಎಷ್ಟೇ ಪ್ರಖರವಾಗಿದ್ದರೂ ದೇಹವೆಂಬುದು ತನ್ನ ಮಾತನ್ನು ಕೇಳಬೇಕಲ್ಲ. ಈಗಾಗಲೇ ನೂರೆಂಟು ನ್ಯೂನತೆಗಳಿಗೆ ಈಡಾಗಿರುವ ಅದು ತನ್ನ ಪಾಡಿಗೆ ತಾನು ಸಾಯುವುದೇ ಸುಖವೆಂದು ನಿರ್ಧರಿಸಿ ನಿಷ್ಕ್ರಿಯವಾಗಿ ಸುಮ್ಮನಾದರೆ ಮನಸ್ಸಾದರೂ ಏನು ಮಾಡೀತು? ಸುಮ್ಮನೇ ಅದೂ ಕಂತೆ ಒಗೆದು ಹೊರಟುಬಿಡುತ್ತದೆ ಎಂದು ಮುಗುಳ್ನಕ್ಕು ಸುಮ್ಮನಾದರು.

ಇಂತಿಪ್ಪ ಎಪ್ಪತ್ತೆರಡು ವರ್ಷದ ಕಾಯದೊಳಗಿನ ಮನಸ್ಸು ಯಾವುದಾದರೂ ಔಷಧ, ಇಂಜೆಕ್ಷನ್‌ನಿಂದ ದೇಹವನ್ನು ಇನ್ನಷ್ಟು ಕ್ರಿಯಾಶೀಲವಾಗಿ, ಸ್ಫೂರ್ತಿದಾಯಕವಾಗಿ ಇರಿಸಿಕೊಳ್ಳಲು ಸಾಧ್ಯವಿಲ್ಲವೇ ಎಂದು ಪದೇಪದೇ ಚಿಂತಿತವಾಗುತ್ತಿತ್ತು. ಯಯಾತಿಯಂತೆ ಲೈಂಗಿಕ ತೃಷೆಗಾಗಿ ಅಲ್ಲದಿದ್ದರೂ, ತನ್ನ ಜ್ಞಾನವನ್ನು ಇನ್ನಷ್ಟು ವೃದ್ಧಿಸಿಕೊಳ್ಳಲು, ಅದನ್ನು ಬರಹದ ರೂಪದಲ್ಲಿ ದಾಖಲಿಸಿ ಮುಂದಿನ ಜನಾಂಗಕ್ಕೆ ದಾರಿದೀಪವಾಗಿಸಲು ಇನ್ನೂ ಕನಿಷ್ಠ ಐವತ್ತು ವರ್ಷಗಳಾದರೂ ಬೇಕಾದೀತೇನೋ ಎಂದು ತೀವ್ರವಾಗಿ ಅನ್ನಿಸಲಾರಂಭಿಸಿತ್ತು.

***

ನಾಲ್ಕೈದು ದಿನಗಳಾಗುತ್ತಿದ್ದಂತೆಯೇ ಸಿಮ್ಹಾನ್ಸ್‌ಗೆ ಸೇರಿರುವ ಒಬ್ಬ ಪೇಶಂಟ್‌ನ ಬಗ್ಗೆ ಚರ್ಚಿಸಲು ಮನೆಗೆ ಬಂದ ಡೈರೆಕ್ಟರ್ ಡಾ. ಪರಮಶಿವನ್, ಅವತ್ತು ತನಗೆ ಡಿಕ್ಕಿ ಹೊಡೆದ ಡಿಯೋ ಗಾಡಿಯ ಹಿಂಬದಿ ಕುಳಿತಿದ್ದ ಹುಡುಗಿಯ ತಲೆಗೆ ತೀವ್ರ ಪೆಟ್ಟು ಬಿದ್ದು ಮೆದುಳು ನಿಷ್ಕ್ರಿಯವಾಗಿದ್ದು, ಆಕೆ ಬದುಕುಳಿಯುವ ಸಾಧ್ಯತೆ ಇಲ್ಲವೆಂದು ತಿಳಿಸಿದರು. ತಾವೇನಾದರೂ ಒಂದು ವೇಳೆ ಬಂದು ಏನಾದರೂ ಸಲಹೆ ಕೊಡಲು ಸಾಧ್ಯವೇ ಎಂದು ಕೇಳಲು ಅವರು ಬಂದಿದ್ದರು. ಅಲ್ಲದೇ ಆ ಹುಡುಗಿಯ ಪೋಷಕರು ಎಲ್ಲ